KAMD610000432019

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ**

ಉಪಸ್ಥಿತರುಃ **ಶ್ರೀಮತಿ.ಪಾರ್ವತಮ್ಮ.ಬಿ.,**
ಬಿ.ಎ., ಎಲ್.ಎಲ್.ಎಂ.
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ದಿನಾಂಕಃ 23 ನೇ ಏಪ್ರಿಲ್ - 2026

**ಅಸಲು ದಾವಾ ಸಂಖ್ಯೆ 11/2019**

**ವಾದಿಗಳು :** ಎಸ್.ಬಿ.ರಾಮೇಗೌಡ ಬಿನ್ ಲೇಃ ಬೆಟ್ಟೇಗೌಡ,
ಸುಮಾರು 65 ವರ್ಷಗಳು, ಮೃತ ವಾರಸುದಾರರು.

1 ಎ) ಗಿರಿಜಮ್ಮ ಕೋಂಃ ಎಸ್.ಬಿ.ರಾಮೇಗೌಡ,
ಸುಮಾರು 55 ವರ್ಷ,

ಬಿ) ಉಮೇಶ್ ಬಿನ್ ಎಸ್.ಬಿ.ರಾಮೇಗೌಡ,
ಸುಮಾರು 34 ವರ್ಷ,

ಸಿ) ಯೋಗೇಶ್ ಬಿನ್ ಎಸ್.ಬಿ.ರಾಮೇಗೌಡ,
ಸುಮಾರು 30 ವರ್ಷ,

ಎಲ್ಲರೂ ವಾಸಃ ಎಂ.ಶೆಟ್ಟಹಳ್ಳಿ ಗ್ರಾಮ,
ಮೇಲುಕೋಟೆ ಹೋಬಳಿ, ಪಾಂಡವಪುರ
ತಾಲ್ಲೂಕು, ಮಂಡ್ಯ ಜಿಲ್ಲೆ.

**(ವಾದಿಯರ ಪರ ಶ್ರೀ.ಹೆಚ್.ಎಂ.ಕೆ.,ವಕೀಲರು)**

ಃ**ವಿರುದ್ಧ** ಃ

**ಪ್ರತಿವಾದಿ** : ಪಂಚಾಯಿತಿ ಅಭಿವೃದಿ ಅಧಿಕಾರಿಗಳು,
ಮಾಣಿಕ್ಯನಹಳ್ಳಿ ಗ್ರಾಮ ಪಂಚಾಯಿತಿ
ಮೇಲುಕೋಟೆ ಹೋಬಳಿ, ಪಾಂಡವಪುರ ತಾಲ್ಲೂಕು.

**(ಪ್ರತಿವಾದಿ ಪರ ಶ್ರೀ.ಎಸ್.ಬಿ.ಜಿ., ವಕೀಲರು)**

| | | |
|---|---|---|
| ದಾವೆ ಸಲ್ಲಿಸಿದ ದಿನಾಂಕ | : | 10.01.2019 |
| ದಾವೆಯ ಸ್ವರೂಪ | : | ಶಾಶ್ವತ ನಿರ್ಬಂದಕಾಜ್ಞೆ |
| ದಾವೆಯಲ್ಲಿ ವಿಚಾರಣೆ ಪ್ರಾರಂಭವಾದ ದಿನಾಂಕ | | 12.06.2024 |
| ದಾವೆ ಇತ್ಯರ್ಥವಾದ ದಿನಾಂಕ | : | 23.04.2026 |
| ಒಟ್ಟು ಅವಧಿ | : | ವರ್ಷ 07 ತಿಂಗಳು 03 ದಿನ 13 |

**(ಪಾರ್ವತಮ್ಮ.ಬಿ.)**
**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ, ನ್ಯಾಯಾಲಯ, ಪಾಂಡವಪುರ.**

**ತೀರ್ಪು**

ವಾದಿಗಳು ಪ್ರಸ್ತುತ ದಾವೆಯನ್ನು, ಪ್ರತಿವಾದಿಯ ವಿರುದ್ಧ ಸಲ್ಲಿಸಿ, ವಾದಿಗಳ ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಸಂಬಂಧಿಸಿದಂತೆ, ಪ್ರತಿವಾದಿ ಹಾಗೂ ಅವರ ಏಜೆಂಟ್, ಸರ್ವೆಂಟ್ಸ್ ಹಾಗೂ ಅವರನ್ನು ಪ್ರತಿನಿಧಿಸುವ ಯಾವುದೇ ವ್ಯಕ್ತಿಗಳಾಗಲೀ, ಅಡ-ತಡೆಯುಂಟು ಮಾಡದಂತೆ, ಅವರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕಾಗಿಯೂ ಹಾಗೂ ಖರ್ಚು ಸಮೇತ ಡಿಕ್ರಿ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**2. ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ.**

ವಾದಿಯು ದಾವಾ ಅನುಸೂಚಿಯಲ್ಲಿ ವಿವರವಾಗಿ ನಮೂದಿಸಿರುವ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಎಂ.ಶೆಟ್ಟಹಳ್ಳಿ ಗ್ರಾಮದ ಕ್ರಮ ಸಂಖ್ಯೆ 165/196 ರಲ್ಲಿರುವ ನಿವೇಶನ ಪೂರ್ವ- ಪಶ್ಚಿಮ: 35 ಅಡಿ ಹಾಗೂ ಉತ್ತರ-ದಕ್ಷಿಣ: 52 ಅಡಿಗಳಲ್ಲಿನ ಸ್ವತ್ತಿನಲ್ಲಿ ಯಾವುದೇ ಅಡ್ಡಿ ಆತಂಕ ಇಲ್ಲದೆ ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ.

ದಾವಾ ಅನುಸೂಚಿ ಸ್ವತ್ತನ್ನು ವಾದಿಯು ದಿನಾಂಕ: 05.12.1978 ರಲ್ಲಿ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಎಂ.ಶೆಟ್ಟಹಳ್ಳಿ ಗ್ರಾಮದ ಕಣ್ಣಿನ ಜವರೇಗೌಡರ ಮಗ ನಿಂಗೇಗೌಡ ಉ: ಕುಳ್ಳೇಗೌಡನಿಂದ ಕ್ರಯಕ್ಕೆ ಪಡೆದ ಸ್ವತ್ತಾಗಿರುತ್ತದೆ, ವಾದಿಯು ದಾವಾಸ್ತಿಯನ್ನು ಕ್ರಯಕ್ಕೆ ಪಡೆದ ನಂತರ ಕ್ರಯ ಪತ್ರದ ರೀತ್ಯಾ ದಾವಾಸ್ತಿಗೆ ಸಂಬಂಧಪಟ್ಟಂತಹ ಪಂಚಾಯಿತಿಯ ಎಲ್ಲಾ ದಾಖಲೆಗಳು ವಾದಿಯ ಹೆಸರಿಗೆ ಬದಲಾವಣೆಗೊಂಡಿರುತ್ತದೆ. ಕ್ರಯಕ್ಕೆ ಪಡೆದಾಗಿನಿಂದ ಈವರೆವಿಗೂ ವಾದಿಯು ದಾವಾ ಸ್ವತ್ತಿನ ಕಂದಾಯ ವಗೈರೆಗಳನ್ನು ವಾದಿಯೇ ಪಾವತಿ ಮಾಡಿಕೊಂಡು ಬರುತ್ತಿರುತ್ತಾರೆ. ವಾದಿಯು ದಾವಾ ಅನುಸೂಚಿ ಸ್ವತ್ತಿನಲ್ಲಿ ಪೂರ್ವ-ಪಶ್ಚಿಮಃ 35 ಅಡಿಗಳು ಮತ್ತು ಉತ್ತರ-ದಕ್ಷಿಣಃ 52 ಅಡಿಗಳ ಪೈಕಿ ಪೂರ್ವ-ಪಶ್ಚಿಮಃ 31 ಅಡಿಗೆ ಹಾಗೂ ಉತ್ತರ- ದಕ್ಷಿಣಃ 38 ಅಡಿಗಳಿಗೆ ಮನೆಯನ್ನು ನಿರ್ಮಾಣ ಮಾಡುತ್ತಿದ್ದು, ಉಳಿಕೆ ಪೂರ್ವ-ಪಶ್ಚಿಮಃ 35 ಅಡಿ, ಉತ್ತರ-ದಕ್ಷಿಣಃ 14 ಅಡಿಗಳ ಖಾಲಿ ನಿವೇಶನವನ್ನು ಧನಗಳ ಕೊಟ್ಟಿಗೆಯ ಒಪ್ಪಾರಿಗಾಗಿ ಖಾಲಿ ಬಿಟ್ಟುಕೊಂಡಿರುತ್ತೇವೆ.

ಪ್ರತಿವಾದಿಗೆ ದಾವಾ ಅನುಸೂಚಿ ಸ್ವತ್ತಿನ ಆಜು-ಬಾಜುವಿನಲ್ಲಿ ಯಾವುದೇ ಸ್ವತ್ತು ಇರುವುದಿಲ್ಲ. ವಸ್ತುಸ್ಥಿತಿ ಮೇಲ್ಕಂಡಂತಿರುವಾಗ ಪ್ರತಿವಾದಿಯಾದ ಮಾಣಿಕ್ಯನಹಳ್ಳಿ ಗ್ರಾಮ ಪಂಚಾಯಿತಿಯವರು ದಿನಾಂಕ:03.01.2019 ರಂದು ವಾದಿಯು ನಿರ್ಮಿಸುತ್ತಿರುವ ಮನೆಯ ದಕ್ಷಿಣ ದಿಕ್ಕಿನ ಕಡೆಗೆ ವಾದಿ ಖಾಲಿ ಬಿಟ್ಟುಕೊಂಡಿರುವ ಪೂರ್ವ-ಪಶ್ಚಿಮಃ 35 ಅಡಿ, ಉತ್ತರ-ದಕ್ಷಿಣಃ 14 ಅಡಿಗಳ ಖಾಲಿ ನಿವೇಶನದಲ್ಲಿ ರಸ್ತೆ ನಿರ್ಮಾಣ ಮಾಡಲು ಟ್ರ್ಯಾಕ್ಟರ್ ಹಾಗೂ ಜೆ.ಸಿ.ಬಿ.ಯಿಂದ ಮಣ್ಣನ್ನು ಸುರಿಯುವುದರ ಮೂಲಕ ರಸ್ತೆ ನಿರ್ಮಾಣ ಮಾಡಲು

ಪ್ರಯತ್ನಿಸಿರುತ್ತಾರೆ. ಪ್ರತಿವಾದಿಗೆ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಅಥವಾ ಅಧಿಕಾರವಾಗಲೀ ಇಲ್ಲದಿದ್ದರು ಸಹ ಗ್ರಾಮದ ಕೆಲವು ರಾಜಕೀಯ ಬಲವುಳ್ಳ ವ್ಯಕ್ತಿಗಳೊಂದಿಗೆ ಷರೀಕ್ಕಾಗಿ ವಾದಿಗೆ ತೊಂದರೆಕೊಡುವ ದುರುದ್ದೇಶದಿಂದ ರಸ್ತೆ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿರುತ್ತಾರೆ. ಪ್ರತಿವಾದಿಯು ಯಾವುದೇ ಭೂ ಸ್ವಾಧೀನ ಪ್ರಕ್ರಿಯೆ ಇಲ್ಲದೆ ಯಾವುದೇ ಅಳತೆ ಕಾರ್ಯ ಮಾಡದೇ ಹಾಗೂ ಯಾವುದೇ ರೀತಿಯ ಸ್ಥಳ ಪರಿಶೀಲನೆ ಮಾಡದೇ ಕಾನೂನುಬಾಹಿರವಾಗಿ ರಸ್ತೆ ನಿರ್ಮಾಣ ಕಾಮಗಾರಿಯ ಪ್ರಯತ್ನದಲ್ಲಿರುತ್ತಾರೆ. ಈ ಸಂಬಂಧ ವಾದಿಯು ದಿನಾಂಕ:08.01.2019 ರಂದು ತಾಲ್ಲೂಕು ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ಪ್ರತಿವಾದಿಯ ವಿರುದ್ಧ ದೂರು ನೀಡಿ ಕ್ರಮ ತೆಗೆದುಕೊಳ್ಳುವಂತೆ ಕೋರಿಕೊಂಡರು ಕಾರ್ಯನಿರ್ವಾಹಣಾಧಿಕಾರಿಗಳು ಪ್ರತಿವಾದಿಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ವಾದಿಗೆ ಗ್ರಾಮ ಪಂಚಾಯಿತಿಯವರ ತಂಟೆ ತಕರಾರುಗಳನ್ನು ಎದುರಿಸಿ ನಿಲ್ಲುವ ಶಕ್ತಿ ವಾದಿಗೆ ಇಲ್ಲದ ಕಾರಣ ಅನ್ಯ ಮಾರ್ಗವಿಲ್ಲದೆ ಪ್ರತಿವಾದಿಯ ಈ ಅಕೃತ್ಯಗಳನ್ನು ತಡೆಯುವಂತೆ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಈ ನ್ಯಾಯಾಲಯದ ಮುಂದೆ ಈ ದಾವೆಯನ್ನು ಸಲ್ಲಿಸಿರುತ್ತಾರೆ.

**3.** ಪ್ರತಿವಾದಿಗೆ ನ್ಯಾಯಾಲಯದ ಮುಖಾಂತರ ದಾವಾ ಸಮನ್ಸ್ ಜಾರಿಯಾಗಿದ್ದು, ವಕೀಲರ ಮೂಲಕ ಪ್ರತಿವಾದಿಯು ಹಾಜರಾಗಿ, ತಮ್ಮ ಲಿಖಿತ ತಕರಾರು ಪತ್ರವನ್ನು ಸಲ್ಲಿಸಿರುತ್ತಾರೆ.

**4. ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳು ಈ ಕೆಳಗಿನಂತಿದೆ:**

ಪ್ರತಿವಾದಿಯು ತಮ್ಮ ಲಿಖಿತ ತಕರಾರು ಪತ್ರದಲ್ಲಿ, ವಾದ ಪತ್ರದ ಅಂಶಗಳನ್ನು ಅಲ್ಲೆಗಳೆದಿದ್ದು, ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯು ಪ್ರತಿವಾದಿ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆಗಾಗಿ ಡಿಕ್ರಿ ಕೋರಿ ಸಲ್ಲಿಸಿರುವ ವಾದಿಯ ದಾವೆಯು ಅಂಶಗಳಿಂದಾಗಲೀ ವಸ್ತು ಸ್ಥಿತಿಯಿಂದಾಗಲೀ ಊರ್ಜಿತವಾಗತಕ್ಕದಲ್ಲ ಈ ಕಾರಣದಿಂದಾಗಿ ವಾದಿಯ ದಾವೆಯನ್ನು ಮೇಲ್ನೋಟಕ್ಕೆ ವಜಾ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯು ಮಾಲೀಕತ್ವ ಘೋಷಣಾ ಪರಿಹಾರಕ್ಕೆ ಡಿಕ್ರಿ ಕೋರದೆ ಮತ್ತು ಮಾಲೀಕತ್ವವನ್ನು ರುಜುವಾತು ಪಡಿಸದೆ ಪ್ರತಿವಾದಿಗಳ ವಿರುದ್ಧ ಶಾಶ್ವತ

ಪ್ರತಿಬಂಧಕಾಜ್ಞೆಗಾಗಿ ಮಾತ್ರ ಡಿಕ್ರಿ ಕೋರಿ ವಾದಿ ಸಲ್ಲಿಸಿರುವ ದಾವೆಯು ಕಾನೂನಿಗೆ ವಿರೋಧವಾಗಿರುತ್ತದೆ.

ದಾವಾ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಖಾಲಿ ನಿವೇಶನದ ವಿವರಗಳು ಅಪೂರ್ಣಗೊಂಡಿರುತ್ತವೆ. ಹಾಗೂ ಚಕ್ಕುಬಂದಿಯ ರೀತ್ಯಾ ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಣ ಭಾಗಕ್ಕೆ ಸಾರ್ವಜನಿಕರು ತಿರುಗಾಡಲು ರಸ್ತೆ ಇದ್ದು, ಈ ಸ್ವತ್ತಿನ ಬಗ್ಗೆ ಪ್ರತಿವಾದಿಯ ಸ್ವಾಧೀನತೆಯನ್ನು ಪ್ರಶ್ನಿಸುವ ಹಕ್ಕು ವಾದಿಗೆ ಇರುವುದಿಲ್ಲ. ಪ್ರತಿವಾದಿ ಇಲಾಖೆಯಲ್ಲಿ ನಮೂದು ಮಾಡಿರುವ ದಾಖಲಾತಿಗಳ ಪ್ರಕಾರ ವಾದಿಯ ಅನುಭಕ್ಕೆ ಒಳಪಟ್ಟಿರುವ ಖಾಲಿ ನಿವೇಶನದ ಅಳತೆ ಪೂರ್ವ- ಪಶ್ಚಿಮ 35 ಅಡಿ, ಉತ್ತರ -ದಕ್ಷಿಣ 50 ಅಡಿ ಎಂಬುದು ವ್ಯಕ್ತವಾಗಿದ್ದು, ಈ ಸ್ವತ್ತಿನಲ್ಲಿ ವಾದಿಯು ಪಂಚಾಯಿತಿ ಪರವಾನಿಗೆ ಇಲ್ಲದೆ ಅಕ್ರಮವಾಗಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದು, ಈ ವಾಸದ ಮನೆಯ ದಕ್ಷಿಣ ದಿಕ್ಕಿನಲ್ಲಿರುವ ಪಂಚಾಯಿತಿ ವ್ಯಾಪ್ತಿಗೆ ಹಾಗೂ ಪಂಚಾಯಿತಿ ಸ್ವಾಧೀನಕ್ಕೆ ಒಳಪಟ್ಟ ತಿರುಗಾಡುವ ಪ್ರದೇಶದ ಮೇಲೆ ವಾದಿಗೆ ಯಾವುದೇ ರೀತಿಯಾದ ಹಕ್ಕು ಮತ್ತು ಸ್ವಾಧೀನತೆ ಇರುವುದಿಲ್ಲ.

ಪಂಚಾಯಿತಿ ಸ್ವಾಧೀನಕ್ಕೆ ಒಳಪಟ್ಟ ಖಾಲಿ ಪ್ರದೇಶದಲ್ಲಿ ಸಾರ್ವಜನಿಕರ ಅಹವಾಲಿನಂತೆ ಪಂಚಾಯಿತಿಯವರು ರಸ್ತೆಯನ್ನು ನಿರ್ಮಾಣ ಮಾಡುವ ಉಪಯೋಗಕ್ಕೆ ಬಿಟ್ಟುಕೊಂಡಿರುವ ರಸ್ತೆಯ ಅನುಭವಕ್ಕೆ ವಾದಿಯು ಸಾರ್ವಜನಿಕರಿಗೆ ಮತ್ತು ಪಂಚಾಯಿತಿಯರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಹಾಗೂ ಪಂಚಾಯಿತಿ ಸ್ವಾಧೀನಕ್ಕೆ ಒಳಪಟ್ಟ ವಿವಾದಿತ ರಸ್ತೆಯನ್ನು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ದಕ್ಕಿಸಿಕೊಳ್ಳುವ ದುರುದ್ದೇಶದಿಂದ ವಾದಿಯು ವಾಸ್ತವಾಂಶಗಳನ್ನು ಮರೆಮಾಚಿ ಪ್ರತಿವಾದಿ ವಿರುದ್ಧ ಈ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತಾರೆ.

ಹಾಲಿ ಪಂಚಾಯಿತಿಯವರು ನಿರ್ಮಾಣ ಮಾಡಿ ಅಸ್ತಿತ್ವದಲ್ಲಿರುವ ತಿರುಗಾಡುವ ಪೂರ್ವದಿಂದ ಪಶ್ಚಿಮ ಭಾಗದಲ್ಲಿ ಮುಖ್ಯ ರಸ್ತೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ಇದರಿಂದ ಜನ ಜಾನುವಾರುಗಳಿಗೆ ಅನುಕೂಲವಾಗಲು ಹಾಗೂ ಆಗಮನ ಮತ್ತು ನಿರ್ಗಮನ ಉಪಯೋಗಕ್ಕಾಗಿ ಸೀಮಿತವಾಗಿದ್ದು, ಈ ರಸ್ತೆಯಲ್ಲಿ ಸಾರ್ವಜನಿಕರು ಉಪಯೋಗಿಸುವಲ್ಲಿ ನಿರ್ಬಂಧ ಏರಲು ವಾದಿಗೆ ಯಾವ ರೀತಿಯಾದ ನೈತಿಕ ಹಕ್ಕು ಇರುವುದಿಲ್ಲ. ಪ್ರತಿವಾದಿ ಗ್ರಾಮ

ಪಂಚಾಯಿತಿ ನೌಕರರಾಗಿದ್ದು, (ಪಿ.ಡಿ.ಒ) ಈ ದಾವೆಯು ದಾಖಲು ಮಾಡುವ ಮುನ್ನ ಪ್ರತಿವಾದಿಗೆ ಸಿ.ಪಿ.ಸಿ.ಕಲಂ 80 ರ ರೀತ್ಯಾ ಪೂರ್ವ ಬಾವಿ ನೋಟೀಸನ್ನು ಜಾರಿ ಮಾಡಲು ಕಡ್ಡಾಯವಿದ್ದರೂ ಸಹ ವಾದಿಯು ಈ ನೀತಿ ನಿಯಮಗಳನ್ನು ಅನುಸರಿಸದೆ ಪ್ರತಿವಾದಿ ವಿರುದ್ಧ ನ್ಯಾಯಾಲಯಕ್ಕೆ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತಾರೆ.

ಈ ಪ್ರತಿವಾದಿಯ ವಿರುದ್ಧ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ. ದಾವಾದಲ್ಲಿ ನಮೂದಿಸಿರುವ ವ್ಯಾಜ್ಯಾ ಕಾರಣ ಸೃಷ್ಟಿಕೃತವಾಗಿದ್ದು, ದಾವ ಪತ್ರದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿದ್ದು, ವಾದಿಯು ಎಲ್ಲಾ ಸಂಗತಿಗಳನ್ನು ರುಜುವಾತು ಪಡಿಸಲು ಹೊಣೆಗಾರರಾಗಿರುತ್ತಾರೆ. ಆದುದರಿಂದ ಪ್ರತಿವಾದಿಯ ಈ ದಾವೆಯು ವಜಾ ವಜಾಮಾಡಬೇಕೆಂದು ಕೋರಿರುತ್ತಾರೆ.

**5.** ವಾದ ಪತ್ರ ಮತ್ತು ಪ್ರತಿವಾದ ಪತ್ರಗಳನ್ನು ಪರಿಶೀಲಿಸಿದ ನಂತರ, ಈ ಕೆಳಗಿನ ವಿವಾದಾಂಶಗಳನ್ನು ರಚಿಸಲಾಗಿದೆಃ

**ISSUES**

**1.** Whether the plaintiff proves that, he is in actual lawful possession and enjoyment of suit schedule properties ?

**2.** Whether the plaintiff proves that, the alleged interference over the suit schedule properties by the defendant ?

**3.** Whether the plaintiff is entitled to relief as sought for in the plaint ?

**4.** What order or decree ?

**6.** ಅಸಲು ವಾದಿಯು ತೀರಿಕೊಂಡಿದ್ದು, ಆತನ ವಾರಸುದಾರರನ್ನು ತರಲಾಗಿದೆ. ವಾದಿಯು ತಮ್ಮ ದಾವೆಯಲ್ಲಿ ಕೋರಿಕೊಂಡಿರುವ ಪರಿಹಾರವನ್ನು ರುಜುವಾತುಪಡಿಸಲು,

ವಾದಿಯ ವಾರಸುದಾರರಾದ ಉಮೇಶ್ ರವರು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರ ಪರವಾಗಿ ನಿಪಿ-1 ರಿಂದ 9 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ತನ್ನ ಪರವಾಗಿ ಇಬ್ಬರು ಸಾಕ್ಷಿದಾರರಾ ಪಿ.ಡಬ್ಲ್ಯೂ-2 ಮತ್ತು ಪಿ.ಡಬ್ಲ್ಯೂ-3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಪ್ರತಿವಾದಿಯು ತನ್ನ ಪರವಾಗಿ ಲಿಖಿತ ತಕರಾರನ್ನು ಸಲ್ಲಿಸಿಕೊಂಡರು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿಲ್ಲ ಹಾಗೂ ದಾಖಲೆಗಳನ್ನು ಹಾಜರುಪಡಿಸಿಲ್ಲ.

**7**. ವಾದಿಗಳ ಮತ್ತು ಪ್ರತಿವಾದಿಯ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು.

**8.** ಎರಡೂ ಪಕ್ಷಗಾರರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿ, ಈ ಮೇಲಿನ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

| | | |
|---|---|---|
| ವಿವಾದಾಂಶ - 1 | : | ಸಕಾರಾತ್ಮಕವಾಗಿ |
| ವಿವಾದಾಂಶ - 2 | : | ಸಕಾರಾತ್ಮಕವಾಗಿ |
| ವಿವಾದಾಂಶ - 3 | : | ಸಕಾರಾತ್ಮಕವಾಗಿ |
| ವಿವಾದಾಂಶ - 4 | : | ಅಂತಿಮ ಆದೇಶದಂತೆ ಈ ಕೆಳಕಂಡ |

## <u>ಕಾರಣಗಳು</u>

**9.** **<u>ವಿವಾದಾಂಶ-1ಃ-</u>** ವಾದಿಯ ವಾರಸುದಾರರಾದ ಉಮೇಶ್ ರವರು ತಮ್ಮ ವಾದ ಪತ್ರಕ್ಕೆ ಅನುಗುಣವಾಗಿ ನ್ಯಾಯಾಲಯದಲ್ಲಿ ಪ್ರಾಸಾ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ತಮ್ಮ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಅಂಶಗಳನ್ನೇ ಪುನರುಚ್ಚರಿಸುತ್ತಾ ನಿಪಿ-1 ರಿಂದ 9 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ತನ್ನ ಪರವಾಗಿ ಇಬ್ಬರು ಸಾಕ್ಷಿದಾರರಾ ಪಿ.ಡಬ್ಲ್ಯೂ-2 ಮತ್ತು ಪಿ.ಡಬ್ಲ್ಯೂ-3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ.

**10.** ವಾದ ಪತ್ರದಲ್ಲಿ ವಾದಿ ಎಸ್.ಬಿ.ರಾಮೇಗೌಡ ರವರು ದಾವಾ ಸ್ವತ್ತಿಗೆ ಮಾಲೀಕರಾಗಿದ್ದರು ಎಂದು ದಿನಾಂಕಃ 05.12.1978 ರ ಮೂಲ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದು ನಿಪಿ-1 ಎಂದು ಗುರುತಿಸಲ್ಪಟ್ಟಿದ್ದು, ಸದರಿ ಕ್ರಯ ಪತ್ರದಂತೆ ಮೂಲ

ವಾದಿ ರಾಮೇಗೌಡ, ಎಂ.ಶೆಟ್ಟಹಳ್ಳಿ ಗ್ರಾಮದ ಕಣ್ಣಿನ ಜವರೇಗೌಡ ರ ಮಗ ನಿಂಗೇಗೌಡ ರವರಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. ಸದರಿ ಪತ್ರದಲ್ಲಿ ಷೆಡ್ಯೂಲ್ ಸ್ವತ್ತು ಪೂರ್ವಕ್ಕೆಃ ನನ್ನ ತಮ್ಮ ಚೆನ್ನೇಗೌಡ ಹಿಸ್ಸೆ, ಪಾಳು ನಿವೇಶನ, ಪಶ್ಚಿಮಕ್ಕೆಃ ನರಸಮ್ಮನ ಕರೀಗೌಡನ ಜಮೀನು, ದಕ್ಷಿಣಕ್ಕೆಃ ಮಾಳಯ್ಯನ ಬಾಬ್ತು ಪಾಳು ನಿವೇಶನ, ಉತ್ತರಕ್ಕೆಃ ಮಲ್ಲೇಗೌಡನ ಕೆಂಪೇಗೌಡನ ವಾಸದ ಮನೆ ಎಂದು ಈ ಮಧ್ಯೆ ಇರುವ ಪೂರ್ವ-ಪಶ್ಚಿಮಃ 14 ಗಜ, ಉತ್ತರ-ದಕ್ಷಿಣಃ 17 ಗಜದ ಸ್ವತ್ತನ್ನು ಕ್ರಯಕ್ಕೆ ಕೊಡಲಾಗಿರುತ್ತದೆ. ಸದರಿ ಸ್ವತ್ತಿನ ನಂಬರ್ ಕ್ರಯ ಪತ್ರದಲ್ಲಿ ನಮೂದಿಸಿರುವುದಿಲ್ಲ.

**11.** ನಿಪಿ-2 ರಲ್ಲಿ ಕ್ರಮ ಸಂಖ್ಯೆಃ 165/196 ಎಂದು ವಾದಿ ರಾಮೇಗೌಡನ ಹೆಸರಿಗೆ ನಿವೇಶನವನ್ನು ತೋರಿಸಿ, ಅದರ ಚೆಕ್ಕುಬಂದಿ ಈ ಕೆಳಗಿನಂತೆ ನಮೂದಿಸಲಾಗಿರುತ್ತದೆ.

> "ನಿವೇಶನ ಚೆಕ್ಕುಬಂದಿಃ ಪೂರ್ವಕ್ಕೆಃ ನಿಂಗಮ್ಮನವರ ನಿವೇಶ, ಪಶ್ಚಿಮಕ್ಕೆಃ ರಸ್ತೆ ಮತ್ತು ಕೆಂಪಯ್ಯನವರ ಹಿಸ್ಸೆ ಸ್ವತ್ತು, ಉತ್ತರಕ್ಕೆಃ ಕರೀಗೌಡ್ನ ಕೆಂಪೇಗೌಡನ ಮನೆ ಸ್ವತ್ತು, ದಕ್ಷಿಣಕ್ಕೆಃ ಗಲ್ಲಿ ಮತ್ತು ಅಂಜನಿಯವರ ಮನೆ. ಪೂರ್ವ-ಪಶ್ಚಿಮಃ 35 ಅಡಿ (ಮೂವತ್ತೈದು ಅಡಿ), ಉತ್ತರ - ದಕ್ಷಿಣಃ 52 ಅಡಿ (ಐವತ್ತೆರಡು ಅಡಿ)"

**12.** ನಿಪಿ-2 ಅನ್ನು ಮಾಣಿಕನಹಳ್ಳಿ ಗ್ರಾಮ ಪಂಚಾಯ್ತಿಯವರು ವಾದಿ ರಾಮೇಗೌಡರ ಹೆಸರಿಗೆ ಕರನಿರ್ಧರಣ ಪಟ್ಟಿಯನ್ನು ಚೆಕ್ಕುಬಂದಿಯೊಂದಿಗೆ ನೀಡಿರುತ್ತಾರೆ. ಪ್ರತಿವಾದಿ ಗ್ರಾಮ ಪಂಚಾಯ್ತಿ ಪಿ.ಡಿ.ಓ ರವರು ಲಿಖಿತ ತಕರಾರನ್ನು ಸಲ್ಲಿಸಿದಾಗ, ವಾದಿಯ ಖಾತೆ ನಂಬರ್ ಬಗ್ಗೆ ಮತ್ತು ಆತನ ಹೆಸರಿಗೆ ನೀಡಿರುವ ಚೆಕ್ಕುಬಂದಿಯ ಸ್ವತ್ತಿನ ವಿವರಗಳ ಬಗ್ಗೆ ಯಾವುದೇ ನಿರಾಕರಣೆ ತೋರಿಲ್ಲ ಮತ್ತು ನಿಪಿ-2 ರ ದಾಖಲೆಯ ಅಂಶಗಳನ್ನು ಅಲ್ಲೆಗಳೆದಿಲ್ಲ.

**13.** ನಿಪಿ-4 ರಂತೆ ವಾದಿ ರಾಮೇಗೌಡ ಇ.ಓ, ತಾಲ್ಲೂಕು ಪಂಚಾಯ್ತಿ ಕಾರ್ಯಾಲಯ,ಪಾಂಡವಪುರ ರವರಿಗೆ ಮಾಣಿಕನಹಳ್ಳಿ ಗ್ರಾಮ ಪಂಚಾಯ್ತಿ ರವರ ವಿರುದ್ಧ ರಸ್ತೆ ನಿರ್ಮಾಣ ಮಾಡಲು ಪ್ರಯತ್ನಿಸಿರುವ ಬಗ್ಗೆ ಅರ್ಜಿ ನೀಡಿದ್ದರೂ ಸಹ ಯಾವುದೇ ಕ್ರಮ

ಕೈಗೊಂಡಿಲ್ಲವೆಂದು ತಿಳಿದು ಬರುತ್ತದೆ. ತದನಂತರ ವಾದಿಯು ನ್ಯಾಯಾಲಯದ ಬಾಗಿಲನ್ನು ತಟ್ಟಿ ಪರಿಹಾರಕ್ಕೆ ಈ ದಾವೆಯನ್ನು ಊಡಿರುವುದು ಕಂಡು ಬರುತ್ತದೆ.

**14.** ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟ ಫ್ರಾಸಾ-1 ರವರನ್ನು ಪ್ರತಿವಾದ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ದಿನಾಂಕಃ 04.12.2024 ರ ಪಾಟೀ ಸವಾಲಿನ ಖಂಡಿಕೆ-4 ರಲ್ಲಿ ಈ ಕೆಳಗಿನಂತೆ ಪ್ರಶ್ನೆಯನ್ನು ಸೂಚಿಸಿರುತ್ತಾರೆ.

> "ಸಾರ್ವಜನಿಕರ ಕೋರಿಕೆಯ ಮೇರೆಗೆ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ರಸ್ತೆ ನಿರ್ಮಾಣ ಮಾಡಲು ನಮ್ಮ ನಿವೇಶನವನ್ನು ನನ್ನ ತಂದೆಯ ಬಳಿ ಪಂಚಾಯ್ತಿಯವರು ಕೇಳಿರುತ್ತಾರೆ ಎಂದರೆ ಸರಿಯಲ್ಲ."

**15.** ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಸಾರ್ವಜನಿಕರ ಕೋರಿಕೆಯ ಮೇರೆಗೆ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ವಾದಿ ರಾಮೇಗೌಡರ ಮನೆ ದಕ್ಷಿಣಕ್ಕೆ ಇರುವ ನಿವೇಶನವನ್ನು ಪಂಚಾಯ್ತಿ ರವರು ರಸ್ತೆ ನಿರ್ಮಿಸಲು ಕೋರಿರುತ್ತಾರೆಂದು ಹೇಳಿಕೊಂಡಿಲ್ಲ. ಸದರಿ ಸಾರ್ವಜನಿಕರ ಉಪಯೋಗಕ್ಕೆ ರಸ್ತೆಯ ಅವಶ್ಯಕತೆ ಇದ್ದಲ್ಲಿ, ಆ ಬಗ್ಗೆ ಪಂಚಾಯ್ತಿಯಲ್ಲಿ ಕಾನೂನಿನಡಿ ಜರುಗಿಸಬಹುದಾದ ಪ್ರಕ್ರಿಯೆಯನ್ನು ನಡೆಸಿ, ಆ ಬಗ್ಗೆ ವಾದಿ ರಾಮೇಗೌಡ ರವರಿಗೆ ನೋಟೀಸ್ ಅನ್ನು ನೀಡಿ ಅವರ ಒಪ್ಪಿಗೆ ಪಡೆದು, ಸದರಿ ನಿವೇಶನಕ್ಕೆ ತಗುಲಬಹುದಾದ ಪರಿಹಾರದ ಮೊತ್ತವನ್ನು ಪಂಚಾಯ್ತಿಯವರು ನಿರ್ಧರಿಸಿ, ಅದನ್ನು ಸಭೆಯಲ್ಲಿ ಚರ್ಚಿಸಿ, ಕ್ರಮ ವಹಿಸುವುದು ಕ್ರಮ ಬದ್ಧವಾಗಿರುತ್ತದೆ. ಆದರೆ ಪ್ರತಿವಾದಿಯು ತಮ್ಮ ಲಿಖಿತ ತಕರಾರಿನಲ್ಲಿ ಫ್ರಾಸಾ-1 ರವರಿಗೆ ಸೂಚಿಸಿರುವ ಪ್ರಶ್ನೆಗೆ ಪೂರಕವಾಗಿ ಕಾನೂನುಕ್ರಮ ಕೈಗೊಂಡ ಬಗ್ಗೆ ದಾಖಲೆ ಲಭ್ಯವಿಲ್ಲ. ಸದರಿ ಪಾಟೀ ಸವಾಲಿನಿಂದ ಪ್ರತಿವಾದಿ ಪಂಚಾಯ್ತಿಯವರು ವಾದಿಯ ಮನೆಯ ದಕ್ಷಿಣಕ್ಕೆ ರಸ್ತೆ ನಿರ್ಮಾಣ ಮಾಡಲು ಪ್ರಯತ್ನಿಸಿರುವುದು ಒಪ್ಪಿತ ಸಂಗತಿಯಾಗಿರುತ್ತದೆ.

**16.** ಫ್ರಾಸಾ-2 ಸಣ್ಣೇಗೌಡ ರವರು ನ್ಯಾಯಾಲಯದಲ್ಲಿ ವಾದಿಯ ಪರವಾಗಿ ಸಾಕ್ಷ್ಯವನ್ನು ನುಡಿದಿದ್ದು, ಅವರು ಸಹ ತಮ್ಮ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಅಂಶಗಳನ್ನೇ

ಪುನರುಚ್ಚರಿಸಿರುತ್ತಾರೆ. ಅವರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ನಿಪಿ-1 ರ ಕ್ರಯ ಪತ್ರದ ಅಂಶಗಳನ್ನು ಒಪ್ಪಿಕೊಂಡಿರುತ್ತಾರೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ರಸ್ತೆ ಇರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ಪ್ರತಿವಾದಿ ಪರ ವಕೀಲರು ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ಖಾಲಿ ಜಾಗ ವಾದಿಯರಿಗೆ ಸೇರಿದ್ದು ಎಂದು ಸೂಚಿಸಿದ್ದು, ಅದನ್ನು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. ಪ್ರತಿವಾದ ಪತ್ರದ ಅಂಶಗಳಿಗೆ ವಿರುದ್ಧವಾಗಿ ದಾವಾ ಸ್ವತ್ತಿನ ದಕ್ಷಿಣಕ್ಕೆ ಪಂಚಾಯ್ತಿಯವರು ರಸ್ತೆ ನಿರ್ಮಿಸಿದ್ದಲ್ಲಿ, ಅದನ್ನು ಸೂಚಿಸಿರುವುದಿಲ್ಲ. ಈ ಅಂಶಗಳಿಂದ ದಾವಾ ಸ್ವತ್ತು ವಾದಿಗೆ ಸೇರಿದ ಸ್ವತ್ತೆಂಬುದು ತಿಳಿದು ಬರುತ್ತದೆ.

**17.** ಮುಂದುವರೆದು ಫ್ರಾಸಾ-2 ರವರನ್ನು ಪ್ರಶ್ನಿಸುತ್ತಾ ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ರಸ್ತೆಯನ್ನು ಸಾರ್ವಜನಿಕರು ಉಪಯೋಗಿಸಲು ವಾದಿ ರಾಮೇಗೌಡ ತೊಂದರೆ ಕೊಡುತ್ತಿರುವುದಾಗಿ ಪಂಚಾಯ್ತಿಗೆ ದೂರು ಬಂದ ಕಾರಣ ಪಂಚಾಯ್ತಿಯವರು ರಾಮೇಗೌಡರಿಗೆ ನೋಟೀಸ್ ನೀಡಿದ್ದು, ಆ ಕಾರಣ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆಂದು ಸೂಚಿಸಿದ್ದು, ಸದರಿ ಪ್ರಶ್ನೆಯನ್ನು ಸಾಕ್ಷಿಯು ನಿರಾಕರಿಸಿರುತ್ತಾರೆ. ಫ್ರಾಸಾ-2 ರವರಿಗೆ ಸೂಚಿಸಿದ ಪ್ರಶ್ನೆಯ ಯಾವುದೇ ಅಂಶಗಳು ಪ್ರತಿವಾದಿಯ ಲಿಖಿತ ತಕರಾರಿನಲ್ಲಿ ಕಂಡು ಬಂದಿಲ್ಲ. ವಾದಿಯು ಸಾರ್ವಜನಿಕರಿಗೆ ತನ್ನ ಸ್ವತ್ತಿನ ಪೂರ್ವಕ್ಕೆ ಇರುವ ರಸ್ತೆಯನ್ನು ಉಪಯೋಗಿಸದಂತೆ ತೊಂದರೆ ಕೊಟ್ಟಿದ್ದಲ್ಲಿ, ಆ ಬಗ್ಗೆ ದೂರು ಇದ್ದಲ್ಲಿ ಮತ್ತು ವಾದಿಗೆ ನೋಟೀಸ್ ಕೊಟ್ಟಿದ್ದಲ್ಲಿ, ಸದರಿ ದಾಖಲೆಯನ್ನು ಪ್ರತಿವಾದಿ ಪಂಚಾಯ್ತಿಯವರು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟು ನ್ಯಾಯಾಲಯದಲ್ಲಿ ಹಾಜರುಪಡಿಸಬಹುದಾಗಿತ್ತು. ಆದರೆ ಯಾವುದೇ ಸಂಗತಿಗಳು ಲಿಖಿತ ತಕರಾರಿನಲ್ಲಿ ಕಂಡು ಬಂದಿಲ್ಲ.

**18.** ಫ್ರಾಸಾ-3 ಎಸ್.ಎನ್.ನಿಂಗರಾಜು ರವರು ನ್ಯಾಯಾಲಯದಲ್ಲಿ ವಾದಿಯ ಪರವಾಗಿ ಸಾಕ್ಷ್ಯವನ್ನು ನುಡಿದಿದ್ದು, ಅವರು ಸಹ ತಮ್ಮ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ಅವರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಪಂಚಾಯ್ತಿಯವರು ರಸ್ತೆಯನ್ನು ಮಾಡಲು ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಮಣ್ಣನ್ನು ಹಾಕಿರುತ್ತಾರೆ ಎಂದು ಸೂಚಿಸಿದ್ದು, ಸದರಿ ಅಂಶಗಳು ಫ್ರಾಸಾ-1 ಮತ್ತು ಫ್ರಾಸಾ-2

ರವರಿಗೆ ಸೂಚಿಸಿದ ಪ್ರಶ್ನೆಗಳಿಗೆ ವಿರುದ್ಧವಾಗಿರುತ್ತದೆ. ಫ್ರಾಸಾ-3 ರವರಿಗೆ ವಾದಿ ದಾವಾ ಸ್ವತ್ತನ್ನು ನಿಂಗೇಗೌಡರವರಿಂದ ಖರೀದಿ ಮಾಡಿದ್ದಾರೆಂದು ಸೂಚಿಸಿದ್ದು, ಸದರಿ ಅಂಶಗಳು ಪ್ರತಿವಾದಿಯ ಒಪ್ಪಿತ ಸಂಗತಿಯಾಗಿರುತ್ತದೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ರಸ್ತೆ ಇದ್ದು, ಸಾರ್ವಜನಿಕರು ಅಲ್ಲಿ ಓಡಾಡುತ್ತಿದ್ದರು ಎಂದು ಸೂಚಿಸಿದ್ದು, ಸದರಿ ಪ್ರಶ್ನೆಯನ್ನು ಸಾಕ್ಷಿಯು ನಿರಾಕರಿಸಿರುತ್ತಾರೆ.

**19.** ಮುಂದುವರೆದು ಸದರಿ ದಕ್ಷಿಣದ ರಸ್ತೆಯನ್ನು ಉಪಯೋಗಿಸಲು ಸಾರ್ವಜನಿಕರಿಗೆ ತೊಂದರೆ ಕೊಡಬಾರದು ಎಂದು ಪಂಚಾಯ್ತಿಯವರು ವಾದಿಗೆ ನೋಟೀಸ್ ನೀಡಿರುತ್ತಾರೆ ಎಂದು ಸೂಚಿಸಿದ್ದು, ಸಾಕ್ಷಿಯು ನಿರಾಕರಿಸಿರುತ್ತಾರೆ. ಫ್ರಾಸಾ-2 ರವರಿಗೆ ವಾದಿಯ ಸ್ವತ್ತಿನ ಪೂರ್ವಕ್ಕೆ ಇರುವ ರಸ್ತೆಯನ್ನು ಸಾರ್ವಜನಿಕರು ಉಪಯೋಗಿಸಲು ವಾದಿಯು ತೊಂದರೆ ಕೊಟ್ಟ ಎಂದು ಸೂಚಿಸಿದ್ದು, ಫ್ರಾಸಾ-3 ರವರಿಗೆ ವಾದಿಯ ಸ್ವತ್ತಿನ ದಕ್ಷಿಣದ ರಸ್ತೆಯನ್ನು ಸಾರ್ವಜನಿಕರು ಉಪಯೋಗಿಸಲು ವಾದಿಯು ತೊಂದರೆ ಕೊಟ್ಟ ಎಂದು ಸೂಚಿಸಿದ್ದು, ವಿಭಿನ್ನ ಪ್ರಶ್ನೆಗಳೊಂದಿಗೆ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿಕೊಂಡಿದ್ದು, ಸ್ಪಷ್ಟವಾದ ಮತ್ತು ನಿಖರವಾದ ಪ್ರತಿವಾದ ಪತ್ರದ ಅಂಶಗಳಿಲ್ಲದೇ ಸೂಚಿಸಿರುವ ಪ್ರಶ್ನೆಗಳು ಲಿಖಿತ ತಕರಾರಿನ ಅಂಶಗಳಿಗೆ ವಿರುದ್ಧವಾಗಿರುತ್ತವೆ. ಪ್ರತಿವಾದಿಯು ಸಾರ್ವಜನಿಕರ ಉದ್ದೇಶಕ್ಕೆ ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ನಿರ್ಮಾಣ ಮಾಡುತ್ತಿರುವುದಕ್ಕಾಗಿ ಫ್ರಾಸಾ-1 ರವರನ್ನು ಪಾಟೀ ಸವಾಲಿನ ಸಮಯದಲ್ಲಿ ಪ್ರಶ್ನಿಸಿದ್ದು, ಫ್ರಾಸಾ-2 ಮತ್ತು ಫ್ರಾಸಾ-3 ರವರಿಗೆ ವಿಭಿನ್ನ ರೀತಿಯಲ್ಲಿ ಪ್ರಶ್ನಿಸಿರುವುದು ಪ್ರತಿವಾದ ಪತ್ರದ ಅಂಶಗಳನ್ನು ಸಂಶಯಿಸುವಂತಾಗಿದೆ. ಕೇವಲ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸುತ್ತಾ ನಿಖರವಾದ ಪ್ರತಿವಾದ ಇಲ್ಲದಿದ್ದರೂ ವಾದಿಯ ವಾದ ಪತ್ರವನ್ನು ಅಲ್ಲಗಳೆಯುತ್ತಾ ಪ್ರತಿವಾದಿ ಗ್ರಾಮ ಪಂಚಾಯ್ತಿಯವರು ವಾದಿಯ ಸ್ವತ್ತಿಗೆ ತೊಂದರೆ ನೀಡಿರುವುದು ಮೌಖಿಕ ಸಾಕ್ಷಿಗಳಿಂದ ಕಂಡು ಬರುತ್ತದೆ.

**20.** ಫ್ರಾಸಾ-1 ರಿಂದ 3 ರವರ ಪಾಟೀ ಸವಾಲಿನಲ್ಲಿ ನಿಪಿ-1 ದಾಖಲೆಯನ್ನು ಪ್ರತಿವಾದಿ ರವರು ಒಪ್ಪಿಕೊಂಡಿರುತ್ತಾರೆ. ಈ ಅಂಶಗಳಿಂದ ದಾವಾ ಸ್ವತ್ತು ವಾದಿ ಎಸ್.ಬಿ.ರಾಮೇಗೌಡರ ಮಾಲೀಕತ್ವಕ್ಕೆ ಒಳಪಟ್ಟಿದ್ದು, ಅವರು ಸದರಿ ಸ್ವತ್ತಿನಲ್ಲಿ

ಕಾನೂನುಬದ್ಧವಾಗಿ ಸ್ವಾಧೀನದಲ್ಲಿದ್ದರು ಎಂದು ಮೌಖಿಕ ಮತ್ತು ದಸ್ತಾವೇಜಿನ ಸಾಕ್ಷಿಗಳಿಂದ ತಿಳಿದು ಬರುತ್ತದೆ. ವಾದಿಯು ಪ್ರತಿವಾದಿಯ ವಿರುದ್ಧ ಯಾವುದೇ ನಿರ್ದೇಶನಾತ್ಮಕ ಪರಿಹಾರವನ್ನು ಕೋರಿರುವುದಿಲ್ಲ. ಕೇವಲ ಶಾಶ್ವತ ನಿರ್ಭಂಧಕಾಜ್ಞೆಯನ್ನು ಕೋರಿರುವುದು ಗಮನಾರ್ಹವಾದ ಸಂಗತಿಯಾಗಿದೆ.

**21.** ವಾದ ಪತ್ರದ ಅಂಶಗಳಿಗೆ ಸಮರ್ಥನೀಯವಾಗಿ ಫ್ರಾಸಾ-1 ದಾಖಲೆಗಳನ್ನು ಹಾಜರುಪಡಿಸಿಕೊಂಡಿದ್ದು, ಆದರೆ ಪ್ರತಿವಾದಿಯು ವಾದಿಯು ಸಾರ್ವಜನಿಕರ ರಸ್ತೆಗೆ ತೊಂದರೆ ನೀಡಿದ್ದಾನೆಂದು ರುಜುವಾತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

**22.** ವಾದಿ ಮತ್ತು ಸಾಕ್ಷಿದಾರರ ಮೌಖಿಕ ಮತ್ತು ದಸ್ತಾವೇಜಿನ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯು ದಾವಾ ಅನುಸೂಚಿತ ಸ್ವತ್ತಿನ ಚೆಕ್ಕುಬಂದಿಯಲ್ಲಿ ಸ್ವಾಧೀನದಲ್ಲಿ ಇರುವುದು ಒಪ್ಪಿತ ಸಂಗತಿಯಾಗಿದೆ. ನಿಪಿ-5 ರಿಂದ ನಿಪಿ-8 ಭಾವಚಿತ್ರಗಳನ್ನು ಗಮನಿಸಿದಾಗ, ರಸ್ತೆ ನಿರ್ಮಾಣ ಮಾಡುತ್ತಿರುವ ಅಂಶಗಳು ಕಂಡು ಬಂದಿದ್ದು, ಆ ಬಗ್ಗೆ ಪ್ರತಿವಾದಿಯು ತಮ್ಮ ಲಿಖಿತ ತಕರಾರಿನಲ್ಲಿ ಅಲ್ಲಗಳೆಯುವ ಯಾವುದೇ ಅಂಶಗಳನ್ನು ನಮೂದಿಸಿಲ್ಲ. ಈಗಾಗಲೇ ಚರ್ಚಿಸಿದಂತೆ ಸದರಿ ಮಾಲೀಕತ್ವದ ದಾವಾ ಅನುಸೂಚಿತ ಸ್ವತ್ತಿನ ಚೆಕ್ಕುಬಂದಿಯಲ್ಲಿ ವಾದಿ ಎಸ್.ಬಿ.ರಾಮೇಗೌಡ ರವರು ಇರುವ ಬಗ್ಗೆ ಯಾವುದೇ ವಿವಾದಾತ್ಮಕತೆ ಇರುವುದಿಲ್ಲ. ಪ್ರತಿವಾದಿಯೇ ವಾದಿಯ ಸ್ವಾಧೀನತೆಯನ್ನು ಒಪ್ಪಿಕೊಂಡಿದ್ದು, ಆ ಕಾರಣ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಚೆಕ್ಕುಬಂದಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆಂದು ಪರಿಗಣಿಸಲಾಗಿದೆ. ಈ ಎಲ್ಲಾ ಅಂಶಗಳಿಂದ ಹಾಗೂ ವಾದಿಯು ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿಗಳ ಚರ್ಚಿತ ಅಂಶಗಳಿಂದ **ವಿವಾದಾಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**23.** <u>**ವಿವಾದಾಂಶ-2ಃ-**</u> ವಾದಿಯು ತನ್ನ ವಾದ ಪತ್ರದಲ್ಲಿ ಪ್ರತಿವಾದಿಯು ತನ್ನ ಮನೆಯ ದಕ್ಷಿಣಕ್ಕಾದಂತೆ ಖಾಲಿ ನಿವೇಶನದಲ್ಲಿ ದುರುದ್ದೇಶದಿಂದ ರಸ್ತೆ ನಿರ್ಮಾಣ ಮಾಡಲು ಪ್ರಯತ್ನಿಸಿರುತ್ತಾರೆಂದು ಮೌಖಿಕ ಸಾಕ್ಷಿಗಳಿಂದ ರುಜುವಾತುಪಡಿಸಿರುತ್ತಾರೆ. ಪ್ರತಿವಾದಿಯು ಲಿಖಿತ ತಕರಾರಿನಲ್ಲಿ ಹೇಳಿರುವ ಅಂಶಗಳು ಮತ್ತು ಫ್ರಾಸಾ-1 ರಿಂದ 3 ರವರ ಪಾಟೀ

ಸವಾಲಿನಲ್ಲಿ ಸೂಚಿಸಿರುವ ಸಂಗತಿಗಳು ವಿಭಿನ್ನವಾಗಿದ್ದು, ಪ್ರತಿವಾದ ಪತ್ರಕ್ಕೆ ಯಾವುದೇ ತಿರುಳು ಇಲ್ಲ. ಪ್ರತಿವಾದ ಪತ್ರದ ಅಂಶಗಳನ್ನು ರುಜುವಾತುಪಡಿಸಲು ಪ್ರತಿವಾದಿಯು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿಲ್ಲ ಮತ್ತು ಪಾಟೀ ಸವಾಲಿನಲ್ಲಿ ಸೂಚಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ಎಲ್ಲಾ ಒಪ್ಪಿತ ಸಂಗತಿಗಳಿಂದ ಮತ್ತು ನ್ಯಾಯಾಲಯದಲ್ಲಿ ಪ್ರತಿವಾದಿಯು ಹಾಜರಾಗಿ, ಲಿಖಿತ ತಕರಾರು ಪತ್ರವನ್ನು ಸಲ್ಲಿಸಿರುವುದರಿಂದ ವಾದಿಯ ಷೆಡ್ಯೂಲ್ ನಲ್ಲಿ ನಮೂದಿಸಿರುವ ಚೆಕ್ಕುಬಂದಿಗೆ ತೊಂದರೆ ಕೊಟ್ಟಿದ್ದಾರೆಂದು ಅಭಿಪ್ರಾಯಿಸಿ, **ವಿವಾದಾಂಶ-2 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**24.** **<u>ವಿವಾದಾಂಶ-3ಃ-</u>** ವಾದಿಯು ದಾವಾ ಷೆಡ್ಯೂಲ್ ನಲ್ಲಿ ಹೇಳಿರುವ ಚೆಕ್ಕುಬಂದಿಯ ಸ್ವತ್ತಿನಲ್ಲಿ ಸ್ವಾಧೀನತೆ ಇರುವ ಬಗ್ಗೆ ಮತ್ತು ಪ್ರತಿವಾದಿ ಆತನ ನಿರಂತರ ಶಾಂತಿಯುತ ಸ್ವಾಧೀನತೆಗೆ ಅಡ್ಡಿಪಡಿಸಿದ್ದಾರೆಂದು ರುಜುವಾತುಪಡಿಸಿದ್ದು, ಆ ಕಾರಣ ವಾದಿಯು ಈ ನ್ಯಾಯಾಲಯದಿಂದ ಶಾಶ್ವತ ನಿರ್ಬಂಧಕಾಜ್ಞೆಯನ್ನು ದಾವಾ ಅನುಸೂಚಿತ ಸ್ವತ್ತಿನ ಚೆಕ್ಕುಬಂದಿಗೆ ಸಂಬಂದಿಸಿದಂತೆ ಮಾತ್ರ ಪರಿಹಾರಕ್ಕೆ ಅರ್ಹರಿರುತ್ತಾರೆಂದು ಅಭಿಪ್ರಾಯಿಸುತ್ತಾ, **ಈ ನ್ಯಾಯಾಲಯವೂ ವಿವಾದಾಂಶ-3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**25.** **<u>ವಿವಾದಾಂಶ-4-</u>** ವಿವಾದಾಂಶ-1 ರಿಂದ 3 ರಲ್ಲಿ ಚರ್ಚಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಆದೇಶ</u>**

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿಗೊಳಿಸಲಾಗಿದೆ.

ಮುಂದುವರೆದು ಪ್ರತಿವಾದಿಯು ಯಾವುದೇ ರೀತಿಯಲ್ಲೂ ವಾದಿಯ ದಾವಾ ಅನುಸೂಚಿತ ಚೆಕ್ಕುಬಂದಿನ

ಸ್ವತ್ತಿನ ಶಾಂತಿಯುತ ಸ್ವಾಧೀನಕ್ಕೆ ತಕರಾರು ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡುವ ಮೂಲಕ ನಿರ್ಬಂಧಿಸಲಾಗಿರುತ್ತದೆ.

ತೀರ್ಪಿನಂತೆ ಡಿಕ್ರಿ ಬರೆಯಲು ಆದೇಶಿಸಲಾಗಿದೆ.

**(ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿದ್ದು, ಸದರಿಯವರು ಬೆರಳಚ್ಚು ಮಾಡಿದ ನಂತರ ಓದಿ ಪರಿಶೀಲಿಸಿ, ಪರಿಷ್ಕರಿಸಿ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕಃ 23 ನೇ ಏಪ್ರಿಲ್ 2026 ರಂದು ಸದರಿ ತೀರ್ಪನ್ನು ಘೋಷಿಸಲಾಗಿದೆ.)**

**(ಪಾರ್ವತಮ್ಮ.ಬಿ.)**
**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ.**

## ಅನುಬಂಧ

**ವಾದಿಯ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿಃ**

| | | |
|---|---|---|
| ಪಿ.ಡಬ್ಲ್ಯೂ- 1 | : | ಉಮೇಶ್.ಎಂ.ಆರ್ |
| ಪಿ.ಡಬ್ಲ್ಯೂ- 2 | : | ಸಣ್ಣೇಗೌಡ |
| ಪಿ.ಡಬ್ಲ್ಯೂ- 3 | : | ಎಸ್.ಎನ್.ಲಿಂಗರಾಜು |

**ವಾದಿಯ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ-1 | : | ದಿನಾಂಕಃ 05.12.1978 ರ ಮೂಲ ಕ್ರಯ ಪತ್ರ |
| ನಿಪಿ-2 | : | ಕರ ನಿರ್ಧರಣಾ ಪಟ್ಟಿ |
| ನಿಪಿ-3 | : | ಕಂದಾಯ ರಶೀದಿ |
| ನಿಪಿ-4 | : | ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ ನೀಡಿರುವ ದೃಢೀಕೃತ ಅರ್ಜಿ |
| ನಿಪಿ-5 ರಿಂದ 8 | : | ನಾಲ್ಕು ಭಾವಚಿತ್ರಗಳು |
| ನಿಪಿ-9 | : | ಒಂದು ಸಿ.ಡಿ. |

**ಪ್ರತಿವಾದಿಯ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿಃ-** ಇಲ್ಲ

**ಪ್ರತಿವಾದಿಯ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ-** ಇಲ್ಲ

**(ಪಾರ್ವತಮ್ಮ.ಬಿ.)**
**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ.**